

# ಕಿರಗೂರು ಎನ್ನುವ ಸುಂದರಸ್ವಪ್ನ

**ಪೂರ್ಣಚಂದ್ರ ತೇಜಸ್ವಿ ಅವರ 'ಕಿರಗೂರಿನ ಗಯ್ಯಾಳಿ'ಗಳು ಕಥೆ ಸಿನಿಮಾ ಆಗಿ ರೂಪುಗೊಂಡಿದೆ. ಇದು ಸಾಹಿತ್ಯ ಮತ್ತು ಸಿನಿಮಾ ನಂಟಿನ ನವೀಕರಣದಂತಿದೆ.**

★ **ರಚಹ**

ಬಿರುಮಳೆಯಲ್ಲಿ ತೋಯ್ದು ಬಂದ ನಂತರದ ಬಿಡುಗಡೆಯ ನಿರಾಳದಲ್ಲಿದ್ದಾರೆ ನಿರ್ದೇಶಕಿ ಸುಮನಾ ಕಿತ್ತೂರು. ಅವರು ಮಾತ್ರವಲ್ಲ, 'ಕಿರಗೂರಿನ ಗಯ್ಯಾಳಿಗಳು' ಚಿತ್ರತಂಡದ ಯಾರನ್ನೇ ಮಾತನಾಡಿಸಿ; ಅಂಥದೊಂದು ಬಿಡುಗಡೆಯ ನಿರುಮ್ಮಳತೆ ಅವರ ಮಾತುಗಳಲ್ಲಿ ಇಣುಕುತ್ತದೆ. ಅದು ಜವಾಬ್ದಾರಿಯೊಂದನ್ನು ಕಳಚಿಕೊಂಡ ಭಾವವಲ್ಲ; ಸವಾಲೊಂದನ್ನು ಖುಷಿಯಿಂದ ನಿಭಾಯಿಸಿದ ಸಂತೃಪ್ತಿಯ ಭಾವುಕತೆ.

ಪೂರ್ಣಚಂದ್ರ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ನೀಳ್ಗತೆ ಕನ್ನಡ ಸಾಹಿತ್ಯದ ಅನನ್ಯ ಕೃತಿಗಳಲ್ಲೊಂದು. ಸಹ್ಯಾದ್ರಿ ತಪ್ಪಲಲ್ಲಿನ ಕಿರಗೂರು ಎನ್ನುವ ಪರಿಸರದಲ್ಲಿ, ದಾನಮ್ಮ ಎನ್ನುವ ಹೆಣ್ಣುಮಗಳ ಮೂಲಕ ಬೀಸುವ ಬದಲಾವಣೆಯ ಗಾಳಿಯ ಕಥನ ತೇಜಸ್ವಿ ಅವರ ಗಾರುಡಿಯಲ್ಲಿ ಅದ್ಭುತವಾಗಿ ನಿರೂಪಣೆಗೊಂಡಿದೆ. ಸಾತ್ವಿಕ ಹಾಗೂ ರೌದ್ರ ರೂಪದಲ್ಲಿ ಗಂಡಸರು ಹಾಗೂ ಹೆಂಗಸರನ್ನು ತೇಜಸ್ವಿ ಅವರು ರೂಪಕಗಳಾಗಿ ಬಳಸಿಕೊಂಡಿರುವುದು ಕೂಡ ಮುರಿದು ಕಟ್ಟುವ ಬಗೆಯೇ ಆಗಿದೆ. ಒಡಲಲ್ಲಿ ಕಿಚ್ಚು ಅಡಗಿಸಿಕೊಂಡ ಇಂಥ ವಿಶಿಷ್ಟ ಕಥೆಯನ್ನು ಸುಮನಾ ಹಂಬಲಿಸಿ ಹಂಬಲಿಸಿ ಸಿನಿಮಾ ಮಾಡಿದ್ದಾರೆ.

ಹಾಗೆ ನೋಡಿದರೆ, ಕಿರಗೂರು ಮಾತ್ರವಲ್ಲ– ಸುಮನಾ ನಿರ್ದೇಶನದ ಹಿಂದಿನ ಸಿನಿಮಾಗಳಲ್ಲೂ ಬಿರುಗಾಳಿ ಹಾಗೂ ಮೌನ ಒಟ್ಟಿಗೆ ಇದ್ದವು. 'ಎದೆಗಾರಿಕೆ' ಚಿತ್ರ ಇದಕ್ಕೆ ಅತ್ಯುತ್ತಮ ಉದಾಹರಣೆ. ಕೊಲೆಗಾರನೊಬ್ಬ ತನ್ನ ಸಾವಿನ ಸಮ್ಮುಖದಲ್ಲಿ ಎದುರಿಸುವ ಮಾನಸಿಕ ಸಂಘರ್ಷವನ್ನು ಸುಮನಾ ನಿಭಾಯಿಸಿದ ರೀತಿ ಪರಿಣಾಮಕಾರಿಯಾಗಿತ್ತು. 'ಎದೆಗಾರಿಕೆ'ಯ ಕಥೆಗಾರ ಅಗ್ನಿ ಶ್ರೀಧರ್ ಅವರು ಕಿರಗೂರಿಗೆ ಚಿತ್ರಕಥೆ ಬರೆದಿರುವುದು ಸಿನಿಮಾದ ಬಗೆಗಿನ ಕುತೂಹಲವನ್ನು ಹೆಚ್ಚಿಸಿದೆ.

ದಾನಮ್ಮನ ಪಾತ್ರದಲ್ಲಿ ನಟಿಸಿರುವ ಶ್ವೇತಾ ಶ್ರೀವಾತ್ಸವ ಅವರಿಗಂತೂ ಕಿರಗೂರು ಹೊಸ ಲೋಕವೊಂದನ್ನೇ ಕಾಣಿಸಿದೆ. ಆ ಕಾರಣದಿಂದಲೇ ಅವರು 'ಇದು ನನ್ನ ಮೊದಲ ಸಿನಿಮಾ' ಎಂದು ಹೋದಲ್ಲೆಲ್ಲ ಬಂದಲ್ಲೆಲ್ಲ ಹೇಳಿಕೊಳ್ಳುತ್ತಿದ್ದಾರೆ. ಈ ಹೇಳಿಕೆ, ಪಾತ್ರವೊಂದು ಕಲಾವಿದನನ್ನು ಪರವಶಗೊಳಿಸುವ ಜಾದೂವಿನಂತಿದೆ. ಹಾಗೆ ನೋಡಿದರೆ, ದಾನಮ್ಮನಿಗೂ ಮೊದಲು ಶ್ವೇತಾ ನಟಿಸಿದ 'ಸೈಬರ್ ಯುಗದೊಳ್ ನವ ಯುವ ಪ್ರೇಮ ಕಾವ್ಯಂ', 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಮತ್ತು 'ಫೇರ್ ಅಂಡ್ ಲವ್ಲಿ' ಚಿತ್ರದಲ್ಲಿನ ಪಾತ್ರಗಳು ಅವರಿಗೆ ಬೇರೆ ಬೇರೆ ಕಾರಣಗಳಿಗಾಗಿ ಹೆಸರು ತಂದುಕೊಟ್ಟಿದ್ದವು. ಈಗ ನಡೆದುಬಂದ ದಾರಿಯ ನೆನಪುಗಳನ್ನು ಕೊಡವಿಕೊಂಡು ದಾನಮ್ಮನ ಪ್ರಭಾವಳಿಯಲ್ಲಿ ಶ್ವೇತಾ ಸುಖಿಸುತ್ತಿದ್ದಾರೆ.

ಶ್ವೇತಾ ಮಾತ್ರವಲ್ಲ– ಪ್ರತಿಭಾವಂತ ನಟ ನಟಿಯರ ದಂಡೊಂದು 'ಕಿರಗೂರಿನ ಗಯ್ಯಾಳಿಗಳು' ಚಿತ್ರದ ಮೂಲಕ ಒಟ್ಟುಗೂಡಿದೆ. ಬಿ.ಜಯಶ್ರೀ, ಗಿರಿಜಾ ಲೋಕೇಶ್, ಸುಕೃತಾ ವಾಗ್ಲೆ, ಕಿಶೋರ್, ಸೋನು, ಅಚ್ಯುತ ಕುಮಾರ್– ಹೀಗೆ ಕನ್ನಡ ಕಲಾವಿದರ ತಂಡವೊಂದು ಕಿರಗೂರಿನ ಬಗ್ಗೆ ನಿರೀಕ್ಷೆಗಳನ್ನು ಹುಟ್ಟುಹಾಕಿದೆ.

ಮನೋಹರ್ ಜೋಷಿ ಛಾಯಾಗ್ರಹಣ ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ 'ಕಿರಗೂರಿನ ಗಯ್ಯಾಳಿಗಳು' ಚಿತ್ರಕ್ಕಿದೆ. ಸಾರಸ್ವತ ಸ್ಪರ್ಶದಿಂದ ಕನ್ನಡ ಸಿನಿಮಾ ದೂರವಾಗುತ್ತಿರುವ ಸಂದರ್ಭದಲ್ಲಿ ರೂಪುಗೊಂಡಿರುವ ಈ ಸಿನಿಮಾ, ಸಾಹಿತ್ಯ ಮತ್ತು ಚಲನಚಿತ್ರ ರಂಗಗಳ ಹೊಸ ಸಖ್ಯದ ರೂಪದಲ್ಲೂ ಮುಖ್ಯವೆನ್ನಿಸುತ್ತದೆ.